ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12
E-mail : Commissioner.pue@gmail.com. Ph.No. : 23361857, 23361858 Fax : 23361852

ಸಂಖ್ಯೆ : ಪಪೂಶಿಇ/ಶೈಶಾ/AKAM/2021-22 ದಿನಾಂಕ :13-01-2022

## ಸುತ್ತೋಲೆ

ವಿಷಯ : ಯುವಜನೋತ್ಸವ ಕಾರ್ಯಕ್ರಮ ಆಚರಿಸುವ ಬಗ್ಗೆ.

ಉಲ್ಲೇಖ : 1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ರವರ ಅರೆ ಸರ್ಕಾರಿ ಪತ್ರ ಸಂ : ಯುಸಕ್ರೀ 212 ಅಮುಕಾ 2021, ದಿನಾಂಕ : 18-12-2021.

2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಪತ್ರ ಸಂಖ್ಯೆ : ಮಮಇ/ಮಕವಿ/ವಿಘ/ಅಮಕಾ/11/2021.22. ದಿನಾಂಕ : 10-01-2022.

*******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ 01 ರ ಅರೆ ಸರ್ಕಾರಿ ಪತ್ರದಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ವತಿಯಿಂದ ಯುವಜನೋತ್ಸವ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದ್ದು, ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯ ಹಾಗೂ ಅಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಯುವ ಪೀಳಿಗೆ ಸರ್ವಾಂಗೀಣ ಬೆಳವಣಿಗೆಗಾಗಿ ಹಾಗೂ ಉತ್ತೇಜನೆ ನೀಡುವ ಉದ್ದೇಶ ಹೊಂದಿದ್ದು ದಿನಾಂಕ : 12.01.2022 ರಿಂದ 18.0182022ರವರೆಗೆ ಯುವ ಸಪ್ತಾಹವನ್ನು ಆಚರಣೆ ಮಾಡಲು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಕೋರಿರುತ್ತಾರೆ.

....2

ಈ ಸಂಬಂಧವಾಗಿ **ದಿನಾಂಕ : 14.01.2022 ರಂದು ಅಪರಾಹ್ನ 3.45 ರಿಂದ 4.25** ರವರೆಗೆ **"ಯುವತಿಯರ ಋತುಸ್ರಾವ"** ಆರೋಗ್ಯ ಕುರಿತಂತೆ ಈ ಕೆಳಕಂಡ ಯೂಟ್ಯೂಬ್ ಲಿಂಕ್ ಮೂಲಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸದರಿ ಕಾರ್ಯಕ್ರಮವನ್ನು ನಿಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿನಿಯರು ಸಕ್ರಿಯವಾಗಿ ಭಾಗವಹಿಸುವಂತೆ ತಿಳಿಸಲು ಹಾಗೂ ಈ ಕಾರ್ಯಕ್ರಮದ ಕ್ರೂಢೀಕೃತ ಮಾಹಿತಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಶೈಕ್ಷಣಿಕ ಶಾಖೆಗೆ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ **ಉಲ್ಲೇಖ 02 ರ ಪತ್ರದ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.**

**ಯೂಟ್ಯೂಬ್ ಲಿಂಕ್ : https://youtu.be/ID8JKbf4z2Q**

**ಜಂಟಿ ನಿರ್ದೇಶಕರು (ಶೈಕ್ಷಣಿಕ)**
**ಪದವಿ ಪೂರ್ವ ಶಿಕ್ಷಣ ಇಲಾಖೆ**

**ಪ್ರತಿಗಳು :**

1. ನಿರ್ದೇಶಕರ ಆಪ್ತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು.
2. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು. ಇವರಿಗೆ ಇಲಾಖಾ ಜಾಲತಾಣದಲ್ಲಿ ಅಳವಡಿಸಲು ಹಾಗೂ ರಾಜ್ಯದ ಎಲ್ಲಾ ಉಪನಿರ್ದೇಶಕರುಗಳ ಇ-ಮೇಲ್ ವಿಳಾಸಕ್ಕೆ ಕಳುಹಿಸಲು.
4. ಕಛೇರಿ ಪ್ರತಿ.

E-3523859/2022
12/01/2022

## ಕರ್ನಾಟಕ ಸರ್ಕಾರ

ಸಂಖ್ಯೆ:ಮಮಅಇ/ಮಕವಿ/ವಿಫ/ಅಮಕಾ/11/2021-22

ನಿರ್ದೇಶಕರ ಕಛೇರಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
1ನೇ ಮಹಡಿ ಬಹುಮಹಡಿಗಳ ಕಟ್ಟಡ
ಅಂಬೇಡ್ಕರ್ ವೀಧಿ, ಬೆಂಗಳೂರು-1
ದಿನಾಂಕ: 10-01-2022

ಆಯುಕ್ತರು,
ಪದವಿ ಪೂರ್ವ ಶಿಕ್ಷಣ ಮಂಡಳಿ,
ಮಲ್ಲೇಶ್ವರಂ 18ನೇ ಕ್ರಾಸ್,
ಬೆಂಗಳೂರು.

ಮಾನ್ಯರೆ,

**ವಿಷಯ:** ಯುವಜನೋತ್ಸವ ಕಾರ್ಯಕ್ರಮ ಆಚರಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ರವರ ಅರೆ ಸರ್ಕಾರಿ ಪತ್ರ ಸಂ:ಯುಸಕ್ರೀ 212 ಅಮುಕಾ 2021/ದಿ:18.12.2021.

*****

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಅರೆ ಸರ್ಕಾರಿ ಪತ್ರದಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದವತಿಯಿಂದ ಯುವಜನೋತ್ಸವ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದ್ದು, ಈ ವರ್ಷ ಸ್ವಾಮಿ ವಿವೇಕಾನಂದರ 15ನೇ ಜನ್ಮ ದಿನಾಚರಣೆಯ ಹಾಗೂ ಅಜಾದಿ ಕಾ ಅಮೃತ ಮಹೋತ್ಸವದ ಅಂಗನವಾಗಿ ಯುವ ಪೀಳಿಗೆಯ ಸರ್ವಾಂಗೀಣ ಬೆಳವಣಿಗೆ ಹಾಗೂ ಉತ್ತೇಜಿಸುವ ಉದ್ದೇಶ ಹೊಂದಿದ್ದು, ದಿನಾಂಕ: 12.01.2022 ರಿಂದ 18.01.2022ರವರೆಗೆ ಯುವ ಸಪ್ತಾಹವನ್ನು ಆಚರಣೆ ಮಾಡಲು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಕೋರಿರುತ್ತಾರೆ.

ಈ ಸಂಬಂಧವಾಗಿ ದಿನಾಂಕ: 14.01.2022 ರಂದು ಅಪರಾಹ್ನ 3.45 ರಿಂದ 4.25 ರವರೆಗೆ **ಯುವತಿಯರ ಋತುಸ್ರಾವ** ಆರೋಗ್ಯ ಕುರಿತಂತೆ ಯೂಟ್ಯೂಬ್ **ಲಿಂಕ್** ಮೂಲಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸದರಿ ಕಾರ್ಯಕ್ರಮವನ್ನು ಕಾಲೇಜು ವಿದ್ಯಾರ್ಥಿನಿಯರು **ವೀಕ್ಷಿಸಲು** ಕ್ರಮವಹಿಸುವಂತೆ **ಕೋರಿದೆ.**

Link: https://youtu.be/ID8JKbf4z2Q

ತಮ್ಮ ವಿಶ್ವಾಸಿ,
ನಿರ್ದೇಶಕರು,
**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,**
ಬೆಂಗಳೂರು.

RDDPa
LH
12/01/2022

1738
12/01/22